ಹದಿಯ ಮೇಲೆ ನಿಂತ ಜೀವನವೇ ನಿಜವಾದ ಜೀವನ. ನಾವೆಲ್ಲ ಆ ಸಾಕ್ಷಾತ್ಕಾರವನ್ನು ಪಡೆಯಲು ಯತ್ನಿಸೋಣ."

**ವಿವಿಧತೆಯಲ್ಲಿ ಏಕತೆ:** ನಾವು ಅನ್ವೇಷಿಸುತ್ತಿರುವ ಸತ್ಯವು ಅನಂತವಾಗಿದೆ. ಈ ಅನಂತವು ಸಾಂತವಾದ ಬಾಹ್ಯವಸ್ತುಗಳಲ್ಲಿ ಯಾವತ್ತೂ ಪರಿಪೂರ್ಣವಾಗಿ ವ್ಯಕ್ತಗೊಳ್ಳುವುದಿಲ್ಲ. ಅನಂತವಾದದ್ದನ್ನು ಅನಂತದಲ್ಲಿಯೇ ಅರಸಬೇಕು; ಅಂತಹ ಅನಂತವಾದ ವಸ್ತು ನಮ್ಮಲ್ಲಿಯೇ ಇದೆ; ಅದೇ ನಮ್ಮ ಪ್ರತ್ಯಗಾತ್ಮ (ಅಂತರಂಗ ಚೈತನ್ಯ). ಈ ಅನಂತವನ್ನು ಅರಸುವುದೇ ಎಲ್ಲದಕ್ಕೂ ಆಧಾರ. ಅದಕ್ಕಾಗಿ ನಾವು ನಮ್ಮ ದೃಷ್ಟಿಯನ್ನು ಒಳಕ್ಕೆ ಹರಿಸಬೇಕೇ ಹೊರತು, ಹೊರಕ್ಕಲ್ಲ. ಬಾಹ್ಯ ಜಗತ್ತೆಂಬುದು ಒಳಿತು, ಕೆಡುಕುಗಳ ಮಿಶ್ರಣವಾಗಿದೆ. ನಮ್ಮ ಬದುಕಿನಲ್ಲಿ ಜೀವನ ಮತ್ತು ಸಾವು, ಸಂತೋಷ ಮತ್ತು ಸಂಕಟಗಳು ಒಟ್ಟೊಟ್ಟಿಗೇ ಸಾಗುತ್ತವೆ. ಹೀಗಾಗಿ ಪರಿಪೂರ್ಣ ಆನಂದದ ಸ್ಥಿತಿಯೆಂಬುದು ಇಲ್ಲಿ ಅಸಾಧ್ಯ. ವೇದಾಂತವು ಇದನ್ನು ಸಾಧಿಸಲು ಹೊರಟಿಲ್ಲ. ಅದಕ್ಕೆ ಬದಲಾಗಿ ಈ ವೈಪರೀತ್ಯಗಳ ಹಿನ್ನೆಲೆಯಲ್ಲಿರುವ ಐಕ್ಯ ತತ್ತ್ವವನ್ನು ಕಂಡುಹಿಡಿಯಲು ಹೊರಟಿದೆ. ಆ ಸತ್ಯತತ್ತ್ವವೇ ತನ್ನ ಅಭಿವ್ಯಕ್ತಿಯಲ್ಲಿ ಬಹುವಾಗಿ ತೋರುವುದು. ಒಳಿತು ಮತ್ತು ಕೆಡುಕುಗಳೆರಡರ ಹಿಂದೆಯೂ, ಎರಡನ್ನೂ ಮೀರಿರುವ ಸತ್ಯತತ್ತ್ವವಿರುವುದು. ಆ ತತ್ತ್ವವು ಒಳಿತು ಕೆಡುಕುಗಳೆರಡರಲ್ಲೂ ಪ್ರಕಟವಾಗುವುದು. ಇವುಗಳನ್ನು ಮೀರಿಹೋಗಿ ಆ ತತ್ತ್ವಕ್ಕೆ ನಿಷ್ಠರಾಗುವಂತೆ ಸ್ವಾಮೀಜಿ ಬೋಧಿಸುತ್ತಾರೆ. ಈ ಸಂದರ್ಭದಲ್ಲಿ ಸ್ವಾಮೀಜಿ ಉಪನಿಷತ್ತಿನ ಸಂದೇಶವನ್ನು ಹೀಗೆ ಉದ್ಧರಿಸುತ್ತಾರೆ:

"ಅವನು ಚಲಿಸುವುದರಲ್ಲೆಲ್ಲ ಇರುವನು. ಅವನು ಪರಿಶುದ್ಧವಾಗಿರುವುದರಲ್ಲೆಲ್ಲ ಇರುವನು. ಅವನು ವಿಶ್ವವನ್ನೆಲ್ಲ ವ್ಯಾಪಿಸಿರುವನು. ಅವನು ಯಜ್ಞದಲ್ಲಿರುವನು. ಮನೆಯಲ್ಲಿರುವ ಅತಿಥಿಯೂ ಅವನೇ. ಅವನು ಮನುಷ್ಯ, ಜಲ, ಪ್ರಾಣಿ, ಸಸ್ಯ – ಎಲ್ಲದರಲ್ಲಿಯೂ ಇರುವನು. ಅವನೇ ವಿಭು. ಅಗ್ನಿಯು ಪ್ರಪಂಚಕ್ಕೆ ಬಂದು ಹಲವು ರೀತಿಗಳಲ್ಲಿ ವ್ಯಕ್ತವಾಗುತ್ತಿರುವಂತೆ, ಗಾಳಿಯು ಪ್ರಪಂಚಕ್ಕೆ ಬಂದು ಹಲವು ವಿಧಗಳಲ್ಲಿ ಕಾಣಿಸುತ್ತಿರುವಂತೆ ಆ ಪರಮಾತ್ಮನು ಕೂಡ ಹಲವು ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುವನು. ಈ ಏಕತೆಯನ್ನು ನೀವು ತಿಳಿದಾಗ ಮಾತ್ರ ನಿಮಗೆ ಅದು ಸತ್ಯವಾಗಿ ಗೋಚರವಾಗುವುದು, ಅದಕ್ಕೆ ಮುಂಚೆ ಅಲ್ಲ. ಆಗ ಎಲ್ಲವೂ ಆಶಾವಾದ. ಏಕೆಂದರೆ ಅವನು ಎಲ್ಲರಲ್ಲಿಯೂ ಕಾಣುವನು. ಇದೆಲ್ಲ ಸತ್ಯವಾದರೆ, ಆ ಪರಿಶುದ್ಧನಾದ, ಅನಂತನಾದ ಆತ್ಮವು ಇದೆಲ್ಲವನ್ನೂ ಪ್ರವೇಶಿಸಿದ್ದರೆ, ಅವನು ಏಕೆ ತಾನೇ ವ್ಯಥೆಪಡುತ್ತಾನೆ? ಏಕೆ ತಾನೇ ದುಃಖಿಸುತ್ತಾನೆ? ಏಕೆ ತಾನೇ ಅಶುದ್ಧವಾಗಿರುವುದು? ಇಲ್ಲ, ಅವನು ಇದಾವುದೂ ಆಗುವುದಿಲ್ಲ ಎನ್ನುತ್ತದೆ ಉಪನಿಷತ್ತು." ಈ ಅಂತರಾತ್ಮನ ಸಾಕ್ಷಾತ್ಕಾರದಿಂದ ಮಾತ್ರವೇ ಶಾಂತಿ, ಬೇರೆ ಯಾವ ಮಾರ್ಗದಿಂದಲೂ ಅಲ್ಲ ಎನ್ನುತ್ತಾರೆ ಪ್ರಾಚೀನ ಋಷಿಗಳು.

**ಆತ್ಮಸ್ವಾತಂತ್ರ್ಯ:** ಎಲ್ಲ ಧರ್ಮಗಳು ಮತ್ತು ತತ್ತ್ವಶಾಸ್ತ್ರಜ್ಞರ ಅಭಿಪ್ರಾಯಗಳಲ್ಲಿ ಸಮಾನವಾಗಿ ಕಂಡಬರುವ ಅಂಶವೆಂದರೆ **'ಮಾನವನ ದಿವ್ಯತೆಯ ಸಿದ್ಧಾಂತ.'** ಮಾನವಾತ್ಮವು ಮೂಲಭೂತವಾಗಿ ಪರಿಶುದ್ಧವಾದುದು ಮತ್ತು ಪರಿಪೂರ್ಣವಾದುದು ಎಂದು ಅದು ಹೇಳುತ್ತದೆ. ಈ ಅಂಶವನ್ನೇ ಹಲವಾರು ಹೋಲಿಕೆಗಳ ಮೂಲಕ, ಪುರಾಣಕತೆಗಳ ಮೂಲಕ ವಿವರಿಸಲಾಗಿದೆ. ಆದರೆ ನಾವೀಗ ಕಾಣುವುದು ಅಧಃಪತನಗೊಂಡ ಮಾನವನನ್ನು. ಇದನ್ನು ಹೇಗೆ ವಿವರಿಸುವುದು? ಅದಕ್ಕೆ ವೇದಾಂತ, ಮಾನವಾತ್ಮಕ್ಕೆ ತಗಲುವ ಕೆಡುಕುಗಳೆಲ್ಲವೂ ಆರೋಪ ಮಾತ್ರ ಎಂದು ಪ್ರತಿಪಾದಿಸುತ್ತದೆ. ಅಂದರೆ, ಕೆಡುಕು ಮಾನವನನ್ನು ಆವರಿಸಿರುವಂತೆ ಕಂಡುಬಂದರೂ, ಆತನ ಆತ್ಮದ ಪರಿಶುದ್ಧತೆಗೆ ಯಾವುದೇ ಧಕ್ಕೆ ಒದಗಿಬಂದಿರುವುದಿಲ್ಲ. ಏಕೆಂದರೆ, ಪರಿಶುದ್ಧತೆ ಎನ್ನುವುದು ಆತ್ಮದ ಒಂದು ಗುಣವಲ್ಲ, ಅದು ಅದರ ಸ್ವಭಾವವೇ ಆಗಿದೆ. ಇದನ್ನು ಕಂಡುಕೊಳ್ಳುವುದು ಹೇಗೆ? ಆ ಮೂಲಕ ನಮ್ಮ ನೈಜಸ್ವಭಾವದ ವಾರಸುದಾರರಾಗುವುದು ಹೇಗೆ? ಉಪನಿಷತ್ತುಗಳು ಬೋಧಿಸುವುದು ಇದನ್ನೇ. ಸ್ವಾಮೀಜಿ ಈ ದೃಷ್ಟಿಯಲ್ಲಿ ಉಪನಿಷತ್ತುಗಳ ಸಂದೇಶವನ್ನು ಹೀಗೆ ಸಂಗ್ರಹಿಸುತ್ತಾರೆ:

" ... ಇಂತಹ ವಿವಿಧ ಸಲಹೆಗಳೆಲ್ಲ ಉಪನಿಷತ್ತಿನಲ್ಲಿವೆ. ನೀವು ಮುಂದುವರೆದಂತೆ, ಇವೆಲ್ಲ ನಿಮಗೆ ಗೊತ್ತಾಗುವುದು. ಕೊನೆಯ ಅತಿ ಶ್ರೇಷ್ಠವಾದ ಉಪದೇಶವೆಂದರೆ, ನೀವು ಯಾವುದಕ್ಕೂ ವ್ಯಥೆ ಪಡಬೇಕಾಗಿಲ್ಲ ಎನ್ನುವುದು... ಸ್ವಾರಾಜ್ಯವನ್ನು (ಆತ್ಮ) ಹೇಗೆ ಸಂಪಾದಿಸಬೇಕು ಎನ್ನುವುದಕ್ಕೆ ಸ್ವಲ್ಪವೂ ನೀವು ಗಮನಕೊಡಬೇಕಾಗಿಲ್ಲ. ಏಕೆಂದರೆ, ನೀವು ಅದನ್ನು ಎಂದಿಗೂ ಕಳೆದುಕೊಂಡಿಲ್ಲ. ಯಾವುದನ್ನು ನೀವು ಕಳೆದುಕೊಂಡಿಲ್ಲವೋ, ಅದನ್ನು ಹುಡುಕಲು ಏಕೆ ಹೋಗಬೇಕು? ನೀವೀಗಾಗಲೇ ಪರಿಶುದ್ಧರು, ಮುಕ್ತರು. ಮುಕ್ತರೆಂದು ಭಾವಿಸಿದರೆ ನೀವು ಈ ಕ್ಷಣವೇ ಮುಕ್ತರಾಗುವಿರಿ. ಬದ್ಧರೆಂದು ಭಾವಿಸಿದರೆ, ಬದ್ಧರಾಗಿಯೇ ಇರುವಿರಿ. ಅತಿ ಧೀರನುಡಿಗಳಿವು... ನೀವು ಈಗ ಸ್ವತಂತ್ರರಾಗಿದ್ದರೆ, ಯಾವುದು ನಿಮ್ಮನ್ನು ಕಳೆದುಕೊಳ್ಳುವಂತೆ ಮಾಡುವುದು? ಸ್ವತಂತ್ರವಾದುದು ಎಂದಿಗೂ ಬದ್ಧವಾಗಲಾರದು."

(ಮುಂದುವರೆಯುವುದು)

## ಓದುಗರ ವೇದಿಕೆ

**ಸ್ವಾಮಿ ವಿವೇಕಾನಂದರ 150ನೇ ಜಯಂತಿ ಸಂದರ್ಭದಲ್ಲಿ 'ವಿವೇಕಪ್ರಭ'ವು ವಿಶೇಷ ಸಂಚಿಕೆಯೊಂದನ್ನು ಹೊರತರಲಿದೆ. ಇದಕ್ಕಾಗಿ ಓದುಗರಿಂದ ಈ ಕೆಳಗಿನ ವಿಷಯದ ಮೇಲೆ ಸಂಕ್ಷಿಪ್ತ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ.**

**ವಿಷಯ: ಸ್ವಾಮಿ ವಿವೇಕಾನಂದರಿಂದ ನಾನು ಪಡೆದ ಸ್ಫೂರ್ತಿ ಮತ್ತು ಅವರು ನನ್ನ ಮೇಲೆ ಬೀರಿದ ಪ್ರಭಾವ**


**ನಿಮ್ಮ ಬರಹಗಳು ಫುಲ್‌ಸ್ಕೇಪ್ ಒಂದು ಪುಟದ ಮೇಲೆ ಇರಬಾರದು. ಸಾಧ್ಯವಾದಷ್ಟೂ ಸ್ವಂತ ಅನುಭವದ ವಿವರಣೆ ಇರುವ ಬರಹಗಳಿಗೆ ಮಾತ್ರ ಆದ್ಯತೆ ನೀಡಲಾಗುವುದು. ನಿಮ್ಮ ಬರಹಗಳನ್ನು ಕಳಿಸಲು ಕಡೆಯ ದಿನಾಂಕ : 1.8.2012.**

**'ಓದುಗರ ವೇದಿಕೆ' ವಿವೇಕಪ್ರಭ ವಿಭಾಗ**
**ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ,**
**ಮೈಸೂರು – 570 020**

# ಈಶ್ವರ ದರ್ಶನಕ್ಕೆ ಉಪಾಯ: ಜಪ-ಧ್ಯಾನ

ಸ್ವಾಮಿ ವೀರೇಶ್ವರಾನಂದ

**ಧ**ರ್ಮದ ಪ್ರಥಮ ಪ್ರಮಾಣವೇ ತ್ಯಾಗ. ತ್ಯಾಗವಿಲ್ಲದೆ ಯಾವ ಧರ್ಮಾನುಷ್ಠಾನವೂ ಸಾಧ್ಯವಿಲ್ಲ. ನಮ್ಮಲ್ಲಿ ಸೂಕ್ತ ವೈರಾಗ್ಯವಿಲ್ಲದಿದ್ದರೆ, ಜಗತ್ತಿನ ಸಮಸ್ತ ಭೋಗವಿಷಯಗಳ ಮೇಲೆ ವಿರಾಗವಿಲ್ಲದಿದ್ದರೆ, ಈ ಭೋಗವಸ್ತುಗಳು ನಮಗೆಂದಿಗೂ ಶಾಶ್ವತ ಶಾಂತಿಯನ್ನು ನೀಡಲಾರವು ಎನ್ನುವ ದೃಢನಿಶ್ಚಯ ನಮಗಿಲ್ಲದಿದ್ದರೆ, ಧರ್ಮಜೀವನದತ್ತ ಹೋಗುವುದು ಎಂದೆಂದಿಗೂ ಸಾಧ್ಯವಿಲ್ಲ. ಈ ಸಂಸಾರದ ಭೋಗಾನುಭವದ ಮತ್ತಿನಲ್ಲಿ ನಾವು ಮುಳುಗಿಹೋಗುತ್ತೇವೆ. ಆದರೆ ಸಂಸಾರದಲ್ಲಿ ಪೆಟ್ಟುಗಳ ಮೇಲೆ ಪೆಟ್ಟುಗಳನ್ನು ತಿಂದಾಗ ನಮ್ಮ ಅನುಭವಕ್ಕೆ ಬರುತ್ತದೆ, ಈ ಸಂಸಾರದ ಬಗ್ಗೆ ನಮ್ಮ ತಿಳಿವಳಿಕೆ ಏನಿದೆಯೋ ಅದು ಎಷ್ಟು ಮಾತ್ರವೂ ಸರಿಯಾದುದಲ್ಲ ಎಂದು. ನಾವು ನೋಡುವ ಈ ಜಗದ ಭೋಗಗಳನ್ನು ಬಿಟ್ಟು ಬೇರಾವುದಾದರೂ ಮಾರ್ಗ ಇದೆಯೇ ಇಲ್ಲವೇ ಎನ್ನುವ ಅನುಸಂಧಾನ ಆಗ ಪ್ರಾರಂಭವಾಗುತ್ತದೆ. ನಾವು ಚಿಂತನಶೀಲರಾಗಿ ವಿಚಾರ ಮಾಡಿದಾಗ ಕಾಣುತ್ತೇವೆ, ಜಗತ್ತಿನ ಪ್ರತಿಯೊಂದು ಜೀವಿಯೂ ಮೃತ್ಯುವಿಗೆ ಅಧೀನವಾಗಿದೆ ಎಂದು. ಪ್ರತಿಯೊಂದು ವಸ್ತುವೂ ಒಂದಲ್ಲ ಒಂದು ದಿನ ನಾಶವಾಗುತ್ತದೆ. ಜನ್ಮ-ಮೃತ್ಯು-ಜರಾ-ವ್ಯಾಧಿ - ಇದೇ ಸಂಸಾರಧರ್ಮವಾಗಿದೆ. ಇದೇ ಬುದ್ಧದೇವನ ಅನುಭವಕ್ಕೆ ಬಂದದ್ದು. ಆತ ಅರಮನೆಯಿಂದ ಹೊರಗೆ ಸುತ್ತಾಡಿ ಬರಲು ಹೋದವನು ಕಂಡದ್ದೇನು? ಮಾನವರು ಜನ್ಮ-ಮೃತ್ಯು-ಜರಾ-ವ್ಯಾಧಿಗಳಿಂದ ಪೀಡಿತರಾಗಿರುವುದನ್ನು, ಇದೇ ಸಂಸಾರಧರ್ಮವಾಗಿರುವುದನ್ನು. ದುಃಖಿತನಾದ ಬುದ್ಧ ಈ ಸಂಸಾರಧರ್ಮದಿಂದ ಹೊರಬೀಳುವ ಯಾವುದಾದರೂ ಉಪಾಯ ಇದೆಯೆ ಅಥವಾ ಇಲ್ಲವೆ ಎಂಬುದನ್ನು ಅರಿತುಕೊಳ್ಳುವ ಸಲುವಾಗಿ ಸಂಸಾರತ್ಯಾಗ ಮಾಡಿದನು. ಭಗವಾನ್ ಶ್ರೀಕೃಷ್ಣ ಇದೇ ಮಾತನ್ನು ಹೇಳುತ್ತಾನೆ: **'ಜನ್ಮ-ಮೃತ್ಯು-ಜರಾ-ವ್ಯಾಧಿ-ದುಃಖದೋಷಾನುದರ್ಶನಮ್'** - ಜನ್ಮ, ಮೃತ್ಯು, ವೃದ್ಧಾಪ್ಯ, ವ್ಯಾಧಿ ಮತ್ತು ದುಃಖಗಳಲ್ಲಿ ದೋಷವನ್ನು ಕಾಣಬೇಕು. ಗೀತೆಯ ಸಾರಸರ್ವಸ್ವವೇ ಇದು: "ಸಂಸಾರದಲ್ಲಿರುತ್ತ ಕೇವಲ ಕರ್ಮ ಮಾಡುವುದರಿಂದ ಶಾಂತಿ ದೊರೆಯಲಾರದು. ಸಂಸಾರದಲ್ಲಿ ಕ್ಷೋಭೆ ಗೊಂದಲಗಳು ಇದ್ದೇ ಇರುತ್ತವೆ. ನಿನಗೆ ಶಾಂತಿ ಪಡೆಯುವ ಇಚ್ಛೆ ಇದ್ದಲ್ಲಿ, ನನ್ನ ಬಳಿಗೇ ಬಾ. ನನ್ನನ್ನೇ ಆರಾಧನೆ ಮಾಡು. ನನ್ನನ್ನೇ ಉಪಾಸನೆ ಮಾಡು." ಹೀಗಿರುವುದರಿಂದಲೇ ನಾಲ್ಕು ಯೋಗಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಯೋಗಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾ ಮುಕ್ತಿಪಥದಲ್ಲಿ ಮುನ್ನಡೆಯಬೇಕಿದೆ.



ನಾಲ್ಕು ಯೋಗಗಳ ಮಧ್ಯೆ ಜ್ಞಾನ ಯೋಗದ ಬಗ್ಗೆ ವಿಚಾರ ಮಾಡಿ ನೋಡೋಣ. "ನಾನು ದೇಹವಲ್ಲ, ಬುದ್ಧಿಯಲ್ಲ, ಅಹಂಕಾರವಲ್ಲ,

**ಭಗವದ್ದರ್ಶನಕ್ಕೆ ಸಾಧನೆ ಅವಶ್ಯಕ ಎಂದು ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುತ್ತಿದ್ದರು. ಈ ಸಾಧನಾಮಾರ್ಗದಲ್ಲಿ ಅಗತ್ಯವಾಗಿ ಅನುಷ್ಠಾನಕ್ಕೆ ತರಬೇಕಾದ ಎರಡು ಅಂಶಗಳೆಂದರೆ, ಜಪ ಮತ್ತು ಧ್ಯಾನ. ಇವುಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಗತ್ಯವಾಗಿ ಅಳವಡಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ಈ ಲೇಖನವು ಪ್ರಬಲವಾಗಿ ಪ್ರತಿಪಾದಿಸುತ್ತದೆ. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಹತ್ತನೆಯ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್ ಅವರು ೧೯೭೫ರ ಆಗಸ್ಟ್ ೧೫ರಂದು, ಅಸ್ಸಾಮಿನ ಗುವಾಹಟಿಯಲ್ಲಿ ಮಾಡಿದ ಅಮೂಲ್ಯಭಾಷಣದ ಸಂಕ್ಷಿಪ್ತ ಅವತರಣಿಕೆ ಇದು. ಪರಮಪೂಜ್ಯ ಸ್ವಾಮೀಜಿಯವರು ಸುಮಾರು ೨೦ ವರ್ಷಗಳ ಕಾಲ ಮಹಾಸಂಘದ ಪರಮಾಧ್ಯಕ್ಷರಾಗಿದ್ದರು. ಅಗಾಧ ಆಧ್ಯಾತ್ಮಿಕ ಪ್ರಬುದ್ಧತೆ, ಅಪಾರ ಪಾಂಡಿತ್ಯ ಮತ್ತು ಆಡಳಿತ ಪರಿಜ್ಞಾನ ಹೊಂದಿದ್ದ ಸ್ವಾಮೀಜಿಯವರು 'ಪ್ರಭು ಮಹಾರಾಜ್' ಎಂದೇ ರಾಮಕೃಷ್ಣ ಮಹಾಸಂಘದಲ್ಲಿ ಪ್ರಸಿದ್ಧರು. ಮೂಲ ಬಂಗಾಳಿಯಲ್ಲಿ ಉದ್ಬೋಧನ ಪತ್ರಿಕೆಯಲ್ಲಿ ಪ್ರಕಟವಾದ ಇದರ ಕನ್ನಡ ಅನುವಾದವನ್ನು ಮಾಡಿಕೊಟ್ಟವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಶ್ರೀಮತಿ ಗಿರಿಜಾದೇವಿ ಅವರು.**

**ಈ ಭಾಷಣದ ಪೂರ್ಣಭಾಗವನ್ನು ಈಗಾಗಲೇ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಪುಸ್ತಕರೂಪದಲ್ಲಿ ಹೊರ ತಂದಿದೆ. ಇದರ ಬೆಲೆ: ₹ 10/– ಮಾತ್ರ. ಅಂಚೆ ವೆಚ್ಚ: ₹ 2/– ಮಾತ್ರ. ; ಆಸಕ್ತ ಓದುಗರು 'ಶ್ರೀರಾಮಕೃಷ್ಣ ಆಶ್ರಮ, ಪ್ರಕಟನ ವಿಭಾಗ, ಯಾದವಗಿರಿ, ಮೈಸೂರು – 570020' – ಈ ವಿಳಾಸಕ್ಕೆ ಹಣ ಕಳುಹಿಸಿ, ಈ ಪುಸ್ತಕ ವನ್ನು ಪಡೆದುಕೊಳ್ಳಬಹುದು.**

ಇದಾವುದೂ ನಾನಲ್ಲ" – ಈ ರೀತಿಯಲ್ಲಿ ವಿಚಾರ ಮಾಡುತ್ತ ಮಾಡುತ್ತ ಆತ್ಮವನ್ನು ಜಡವಸ್ತುಗಳಿಂದ ಬೇರ್ಪಡಿಸಿ ಅರಿಯುತ್ತಾ ಹೋದರೆ, ಕೊನೆಗೊಮ್ಮೆ ಆತ್ಮದರ್ಶನ ವಾಗುವುದು. ಇದೇ ವಿಚಾರವನ್ನೇ ಸರಿಯಾದ ರೀತಿಯಲ್ಲಿ ಮನನ ಮಾಡುತ್ತ, ಧ್ಯಾನದಲ್ಲಿ ಪ್ರತಿಷ್ಠಿತವಾದರೆ ಆತ್ಮಜ್ಞಾನ ಪ್ರಾಪ್ತಿಯಾಗುತ್ತದೆ.

ಇದೇ ಬಗೆಯಲ್ಲಿ ಕರ್ಮಯೋಗಾನುಷ್ಠಾನ. ತನ್ನ ಸ್ವಾರ್ಥಕ್ಕಾಗಿ ಯಾವುದೇ ರೀತಿಯ ಚಿಂತೆ ಮಾಡದೆ ಕೇವಲ ಇತರರ ಹಿತಕ್ಕಾಗಿಯೇ ಕೆಲಸ ಮಾಡುವುದು ಸಾಧ್ಯವಾದಲ್ಲಿ, ಅಂತಹ ಕೆಲಸ ಮಾಡುತ್ತ ಮಾಡುತ್ತ ನಮ್ಮ ಬಗ್ಗೆ ನಾವು ಮರೆತೇ ಬಿಡುತ್ತೇವೆ. ಇತರರ ಬಗೆಗಿನ ಚಿಂತೆಯೇ ನಮ್ಮ ಮನಸ್ಸಿನ ತುಂಬ ನಿಲ್ಲುತ್ತದೆ. ಹೀಗೆ ಕರ್ಮದಲ್ಲಿ ತೊಡಗಿ ಕೊನೆಗೊಮ್ಮೆ ಜಗತ್ತಿನೊಂದಿಗೆ ಒಂದಾಗಿಬಿಡುತ್ತೇವೆ. ಈ ಅವಸ್ಥೆ ಪ್ರಾಪ್ತಿಯಾದಾಗ 'ನಾನು, ನನ್ನದು' ಎನ್ನುವ ಜ್ಞಾನ ಒಮ್ಮಿಂದೊಮ್ಮೆಗೇ ಮಾಯ ವಾಗಿಬಿಡುತ್ತದೆ, ಭಗವಂತನ ದರ್ಶನ ಸುಲಭವಾಗಿ ಲಭ್ಯವಾಗುತ್ತದೆ.

ಭಕ್ತಿಯೋಗದಲ್ಲಿ ಭಗವಂತನ ಚಿಂತನೆಯಲ್ಲೇ ತೊಡಗಿರುತ್ತಾ, "ನಾನು ಏನೆಲ್ಲ ಕರ್ಮ ಮಾಡುತ್ತೇನೋ ಅದೆಲ್ಲವನ್ನೂ ಭಗವಂತನಿಗಾಗಿ ಮಾಡುತ್ತೇನೆ" ಎನ್ನುವ ಭಾವನೆಯಿಂದ ಸದಾ ಅವನ ಚಿಂತನೆಯಲ್ಲಿ ತನ್ಮಯನಾದಾಗ, ವೈಯಕ್ತಿಕ ವಿಷಯಗಳು ಮರೆತೇಹೋಗಿ ಎಲ್ಲವೂ ಭಗವನ್ಮಯವಾಗುತ್ತದೆ. ಆಗ ಭಗವದ್ದರ್ಶನವಾಗುವುದು.

ಮತ್ತೆ ರಾಜಯೋಗವೂ ಇದೇ ರೀತಿಯಲ್ಲಿದೆ. ಯಾವಾಗ ನಾವು ನಮ್ಮ ಸಮಸ್ತ ಚಿಂತನೆಗಳನ್ನೂ ಬಿಟ್ಟು ಕೇವಲ ಭಗವಂತನ ಚಿಂತನೆಯಲ್ಲಿ ದೇಹ, ಮನಸ್ಸುಗಳನ್ನು ಸ್ಥಿರಗೊಳಿಸುತ್ತೇವೆಯೋ ಆಗ ಮನಸ್ಸಿನಲ್ಲೇಳುವ ಸಕಲ ವೃತ್ತಿಗಳೂ ನಾಶವಾಗಿ, ಒಂದೇ ವೃತ್ತಿ ಮಾತ್ರ ಉಳಿಯುತ್ತದೆ; ಅರ್ಥಾತ್, ಭಗವಂತನ ಚಿಂತನೆಯಲ್ಲಿ ಮನಸ್ಸು ಮಗ್ನವಾಗಿಬಿಡುತ್ತದೆ. ಇದು ಹೇಗೆಂದರೆ, ನಿರ್ವಾತ ಸ್ಥಳದಲ್ಲಿರಿಸಿದ ದೀಪದ ಕುಡಿಯಂತೆ. ಯಾವ ಸ್ಥಳದಲ್ಲಿ ಗಾಳಿ ಬೀಸುತ್ತಿಲ್ಲವೋ ಅಲ್ಲಿ ದೀಪವು ಒಂದಿಷ್ಟೂ ಅಲುಗಾಡದೆ ಸ್ಥಿರವಾಗಿ ಉರಿಯುವ ಹಾಗೆ ಮನಸ್ಸು ನಿಶ್ಚಲವಾಗಿ ಏಕಾಗ್ರತೆಯಿಂದ ಭಗವಚ್ಚಿಂತನೆಯಲ್ಲಿ ನೆಲೆಗೊಳ್ಳುತ್ತದೆ. ಆಗ ಭಗವಂತನ ದರ್ಶನ ವಾಗುತ್ತದೆ.

ಆದರೆ ಪ್ರಾರಂಭದಲ್ಲಿ ಸಗುಣಬ್ರಹ್ಮ ಅಥವಾ ನಮ್ಮ ಇಷ್ಟದೇವತೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದು ಅತ್ಯಂತ ಕಠಿಣವಾದ ಕೆಲಸ. ಆದಕಾರಣ ಪ್ರಾರಂಭದಲ್ಲಿ ಬಾಹ್ಯಪೂಜಾದಿಗಳು, ತದನಂತರ ಜಪ ಹಾಗೂ ಧ್ಯಾನ – ಇವುಗಳೆಲ್ಲದರ ಅಗತ್ಯವಿದೆ. ಈ ಬಾಹ್ಯಪೂಜೆಯು ಸಾಧನೆಯ ಅತಿ ಕೆಳಗಿನ ಸೋಪಾನವಾಗಿದೆ. ಬಾಹ್ಯಪೂಜಾದಿಗಳನ್ನು ಮಾಡುತ್ತ ಮಾಡುತ್ತ, ಮನಸ್ಸು ಭಗವಂತನಲ್ಲಿ ನೆಲೆಗೊಳ್ಳಲು ಸಿದ್ಧವಾಗಿ ನಿಂತಾಗ, ಜಪದಲ್ಲಿ ತೊಡಗಬೇಕು. ಹೀಗೆ ಶ್ರದ್ಧಾಪೂರ್ಣವಾಗಿ ಜಪ ಮಾಡುತ್ತ ಮುಂದು ವರಿದಂತೆ ಮನಸ್ಸು ಧ್ಯಾನಕ್ಕೆ ಸನ್ನದ್ಧವಾದಾಗ, ಧ್ಯಾನ ಮಾಡಲು ಪ್ರಾರಂಭಿಸಬೇಕು. ಧ್ಯಾನವೇ ಸರ್ವಶ್ರೇಷ್ಠ ಸಾಧನೆ. ಈಗ ನಮ್ಮಲ್ಲಿ ಯಾರು ಧರ್ಮಜೀವನದಲ್ಲಿ ನಿರತರೋ ಅವರು ಹೊರಗಿನ ಪೂಜಾದಿಗಳಿಗೆ ಹೆಚ್ಚು ಆದ್ಯತೆ ನೀಡುತ್ತಾರಾದರೂ, ಜಪ–ಧ್ಯಾನಗಳಿಗೆ ಅಷ್ಟೊಂದು ಪ್ರಾಧಾನ್ಯ ನೀಡುವುದಿಲ್ಲ. ಬಾಹ್ಯಪೂಜಾಕಾರ್ಯದಲ್ಲಿಯೇ ಸಮಯವನ್ನು ಕಳೆಯುತ್ತಾರೆ. ದೇವರ ಕೋಣೆಗೆ ಹೋಗುತ್ತಾರೆ, ಅಲ್ಲಿ ಅನೇಕ ದೇವರುಗಳು (ಪಟಗಳು–ವಿಗ್ರಹಗಳು) ಇರುತ್ತವೆ. ಪ್ರತಿಯೊಬ್ಬ ದೇವತೆಗೂ ಹೂವು ಇತ್ಯಾದಿಗಳನ್ನು ಇಟ್ಟು ನೀರು–ನೈವೇದ್ಯಗಳನ್ನು ಅರ್ಪಿಸುತ್ತಾರೆ. ಇದರಲ್ಲೇ ದಿನದ ಹೆಚ್ಚು ಸಮಯ ಕಳೆದುಹೋಗುತ್ತದೆ. ಅನಂತರ ಜಪಕ್ಕೆ ಕುಳಿತುಕೊಳ್ಳಲು ಸಮಯವೇ ಉಳಿಯುವುದಿಲ್ಲ. ಇನ್ನು ಧ್ಯಾನ ಮಾಡುವುದಂತೂ ದೂರದ ಮಾತೇ ಸರಿ. ಅನೇಕರು ಹೇಳುತ್ತಾರೆ, ನಮ್ಮ ಮನಸ್ಸು ಸ್ಥಿರವಾಗಿ ನಿಲ್ಲುವುದೇ ಇಲ್ಲ ಎಂದು. ಏನು ಮಾಡಿದರೆ ಮನಸ್ಸು ಸ್ಥಿರವಾಗುತ್ತದೆ? ಜಪ ಮತ್ತು ಧ್ಯಾನ ಮಾಡದಿದ್ದಲ್ಲಿ ಮನಸ್ಸು ಸ್ಥಿರವಾಗುವುದಿಲ್ಲ. ಅನೇಕರು ಭಾವಿಸುತ್ತಾರೆ, ಮಂತ್ರದೀಕ್ಷೆ ಪಡೆದುಬಿಟ್ಟರೆ ಒಂದೆರಡು ದಿನಗಳಲ್ಲಿ ಮನಸ್ಸು ಸ್ಥಿರವಾಗಿಬಿಡುತ್ತದೆ ಎಂದು. ಇದು ಮತ್ತೊಂದು ವಿಷಯ. ಶ್ರೀಮಾತೆಯವರು ಹೇಳುತ್ತಾರೆ, "ಮಗು, ಋಷಿ, ಮುನಿಗಳು ಜನ್ಮಜನ್ಮಾಂತರಗಳಲ್ಲಿ ಮುಕ್ತಿಯನ್ನು ಪಡೆಯಲಾಗಲಿಲ್ಲ. ಅವರೆಲ್ಲ ಎಷ್ಟು ಶ್ರಮವಹಿಸಿ ಸಾಧನೆ, ಭಜನೆ ಮಾಡಿ ಅದನ್ನು ಪಡೆದುಕೊಂಡರು! ಅದನ್ನು ನೀನು ಈ ಕೂಡಲೇ 'ಥಟ್' ಅಂತ ಪಡೆದುಕೊಳ್ಳಲು ಇಚ್ಛಿಸುತ್ತಿದ್ದೀಯೆ. ಅದೇನು ಸಾಧ್ಯವಾಗುತ್ತದೆಯೇ?" ಅವರು ಮುಂದುವರಿದು ಹೇಳುತ್ತಾರೆ, "ಶ್ರೀರಾಮಕೃಷ್ಣರು ಬಂದು ಎಲ್ಲವನ್ನೂ ಸುಲಭವಾಗಿ ದೊರಕುವಂತೆ ಮಾಡಿಬಿಟ್ಟರು. ಈಗ ಅಲ್ಪ ಸ್ವಲ್ಪ ಮಾಡಿದರೂ ಸಿದ್ಧಿಸಿಯೇ ಬಿಡುತ್ತದೆ." ಹಾಗಿದ್ದರೂ ಸಹ ನಾವು ಅಷ್ಟಿಷ್ಟಾದರೂ ಮಾಡಬೇಕಾಗುತ್ತದೆ. ಇಷ್ಟನ್ನಾದರೂ ನಾವು ಮಾಡದೆ ಹೋದರೆ ಹೇಗೆ ತಾನೆ ಸಾಧ್ಯವಾದೀತು? ಸಾಧಾರಣವಾಗಿ ನಾನು ನೋಡಿದ್ದೇನೆ, ಯಾರು ಜಪ ಮಾಡುತ್ತಾರೋ – ಎಲ್ಲರೂ ಹಾಗಿಲ್ಲದಿದ್ದರೂ, ಹೆಚ್ಚಿನಂಶ ಭಕ್ತರು – ಸಾಕಷ್ಟು ಸಮಯವನ್ನು ಬಾಹ್ಯಪೂಜಾ ಕೈಂಕರ್ಯದಲ್ಲಿ ಕಳೆದುಬಿಡುತ್ತಾರೆ. ನಂತರ ೧೦೮ ಸಲ ಜಪ ಮಾಡಿದರೆ ಎಲ್ಲವೂ ಸಮಾಪ್ತಿಗೊಂಡಂತೆ ಎಂದು ಕೊಳ್ಳುತ್ತಾರೆ. ೧೦೮ಕ್ಕಿಂತ ಅಧಿಕ ಪ್ರಮಾಣದಲ್ಲಿ ಜಪ ಮಾಡುವುದರಿಂದ ಪ್ರಯೋಜನ ಇದೆ ಎನ್ನುವ ವಿಷಯ ಅವರ ಅರಿವಿಗೇ ಬಂದಂತಿಲ್ಲ. ಇಷ್ಟು ಮಾಡಿದರೆ ಸಾಕೇ ಸಾಕು, ಎಲ್ಲವೂ ಸಿದ್ಧಿಸುತ್ತದೆ ಎನ್ನುವ ಭಾವನೆ ಅವರದು. ಇದು ಸರಿಯಾದ

ತಿಳಿವಳಿಕೆಯಲ್ಲ. ಜಪವನ್ನು ಹೆಚ್ಚು ಹೆಚ್ಚಾಗಿ ಮಾಡಿದಂತೆಲ್ಲ, ಭಗವಂತನ ದರ್ಶನಲಾಭ ಶೀಘ್ರವಾಗಿ ಉಂಟಾಗುವುದು.

**ಜಪ ಎಂದರೆ ಏನು?** ಈಶ್ವರನ ಯಾವುದೋ ಒಂದು ಮೂರ್ತಿಯನ್ನು ನಮ್ಮ ಇಷ್ಟದೇವತೆ ಎಂದು ಸ್ವೀಕರಿಸಿ, ಆ ದೇವತೆಯ ಹೆಸರು ಅಥವಾ ಮಂತ್ರವನ್ನು ಪುನಃ ಪುನಃ ಆವೃತ್ತಿ ಮಾಡುವುದು. **ಮಂತ್ರ ಎಂದರೆ ಏನು?** ಯಾವುದು ನಮ್ಮ ಮನಸ್ಸನ್ನು ಹೊರ ಜಗತ್ತಿನಿಂದ ಎಳೆದು ತಂದು ಭಗವಂತನ ಪಾದಪದ್ಮಗಳಲ್ಲಿ ಹಿಡಿದು ನಿಲ್ಲಿಸುವುದೋ ಅದೇ ಮಂತ್ರ. ಈ ಬೀಜಮಂತ್ರದ ಜಪದ ಮೂಲಕ ಅಂತರಂಗದಲ್ಲಿನ ಆಧ್ಯಾತ್ಮಿಕ ಶಕ್ತಿಯ ಸ್ಫುರಣವಾಗುತ್ತದೆ. ಆ ಶಕ್ತಿಯ ಒತ್ತಡದಿಂದ ಕ್ರಮಕ್ರಮವಾಗಿ, ಸಾವಧಾನವಾಗಿ ಅದು ಭಗವಂತನ ದರ್ಶನದ ದಿಕ್ಕಿನತ್ತ ಮಾನವನನ್ನು ಕೊಂಡೊಯ್ಯುತ್ತದೆ. ಆದುದರಿಂದಲೇ ಮಂತ್ರಜಪವು ಅಧ್ಯಾತ್ಮಸಾಧನೆಯ ಮುಖ್ಯ ಅಂಶವಾಗಿದೆ. ಜಪ ಮಾಡುವ ಬೀಜಮಂತ್ರದಲ್ಲಿ ಸಮಸ್ತ ಆಧ್ಯಾತ್ಮಿಕ ಶಕ್ತಿ ಅಡಗಿದೆ. ಜಪ ಮಾಡದಿದ್ದರೆ ಈ ಶಕ್ತಿ ಉದ್ದೀಪನಗೊಳ್ಳುವುದಿಲ್ಲ. ಹೀಗಿರುವಲ್ಲಿ ಕೇವಲ ೧೦೮ ಸಲ ಮಾತ್ರ ಜಪ ಮಾಡುವುದರಿಂದ ಸಾಧಕನು ಹೇಗೆ ತಾನೇ ಮುಂದುವರಿಯಲು ಸಾಧ್ಯ? ಅತ್ಯಧಿಕ ಜಪ ಮಾಡಲೇಬೇಕು. ಆದರೆ ಅನೇಕರಿಗೆ ಸಂಸಾರದ ನಾನಾ ಜಂಜಡಗಳಲ್ಲಿ ತೊಡಗಿರ ಬೇಕಾದ ಕಾರಣ, ಜಪ ಮಾಡಲು ಹೆಚ್ಚಿನ ಸಮಯ ಇರುವುದಿಲ್ಲ. ಎಲ್ಲ ಸಮಯದಲ್ಲೂ ಮನಸ್ಸಿನಲ್ಲೇ ಜಪ ಮಾಡಬೇಕು ಎಂದು ಸಮಯಾವಕಾಶವಿಲ್ಲದ ನಮ್ಮಂಥವರಿಗಾಗಿಯೇ ಹೇಳಲಾಗಿದೆ. ಆದ್ದರಿಂದ ನಮ್ಮ ಎಲ್ಲ ಕಾರ್ಯಕಲಾಪಗಳ ಮಧ್ಯೆಯೂ ಮನದಾಳದಲ್ಲಿ ಜಪ ಮಾಡಬೇಕು.

ಅರ್ಜುನನಿಗೆ ಭಗವಂತ ಹೇಳಿದ ಮಾತೂ ಇದೇ – **"ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುದ್ಧ್ಯ ಚ"** – "ಸದಾಕಾಲವೂ ನನ್ನ ಸ್ಮರಣೆ, ಮನನ ಮಾಡು ಮತ್ತು ಯುದ್ಧ ಮಾಡು. ಇವೆರಡೂ (ಕೆಲಸದೊಂದಿಗೆ ಜಪ) ಒಂದರೊಡನೊಂದು ಕೂಡಿಕೊಂಡೇ ನಡೆಯಬೇಕು. ನೀನು ಸ್ಮರಣ, ಮನನ ಮಾಡಲು ಹೊರಟು, ಯುದ್ಧವನ್ನು ನಿಲ್ಲಿಸಿಬಿಟ್ಟರೆ, ಅದು ಆಗದ ಮಾತು. ನೀನಾದರೋ ಪಾಂಡವರ ಗೆಲುವಿಗೆ ಪ್ರಧಾನ ಅವಲಂಬನವಾಗಿದ್ದೀಯೆ. ನೀನೇನಾದರೂ ಯುದ್ಧದ ಮಧ್ಯೆ ಎರಡು ನಿಮಿಷ ಸುಮ್ಮನೆ ಇದ್ದುಬಿಟ್ಟೆ ಎಂದರೆ ಏನೇನು ಅನರ್ಥವಾದೀತೋ ಹೇಳಲಾಗದು" – ಇದು ಶ್ರೀಕೃಷ್ಣನ ಮಾತಿನ ತಾತ್ಪರ್ಯ.

ಭಗವಂತ ಆದೇಶಿಸಿರುವಂತೆ ನಾವೂ ಸಹ ಸಂಸಾರದ ಕೆಲಸಕಾರ್ಯಗಳೊಂದಿಗೇ ಭಗವಂತನ ನಾಮಸ್ಮರಣೆ ಮಾಡಬೇಕಿದೆ – ಮನಸ್ಸಿನಲ್ಲೇ ಸ್ಮರಣೆ. ಮನಸ್ಸಿನಲ್ಲಿ ನಿಶ್ಚಯಭಾವ ಇರಬೇಕು, ಕೇವಲ ೧೦೮ ಸಲ ಜಪ ಮಾಡುವುದರಿಂದ ಮುನ್ನಡೆ ಅಸಾಧ್ಯ ಎಂದು. ಮಂತ್ರದೀಕ್ಷೆ ಪಡೆದುಕೊಂಡು ೧೦೮ ಸಲ ಜಪ ಮಾಡುತ್ತೇನೆ ಎನ್ನುವುದಕ್ಕಷ್ಟೇ ಮಂತ್ರದೀಕ್ಷೆ ಖಂಡಿತವಾಗಿಯೂ ಸೀಮಿತವಾಗಿಲ್ಲ. ಎಲ್ಲ ಸಮಯದಲ್ಲಿಯೂ ಜಪ ನಡೆಯಬೇಕು. ಶ್ರೀಮಾತೆ ಹೇಳುತ್ತಾರೆ, "ಎಲ್ಲರೂ ಬಂದು ಬಂದು ಹೇಳುತ್ತಾರೆ, ನಮಗಾವ ಅನುಭವವೂ ಆಗುತ್ತಿಲ್ಲವಲ್ಲ ಎಂದು. ಪ್ರತಿದಿನವೂ ಹತ್ತು ಹದಿನೈದು ಸಾವಿರ ಜಪ ಮಾಡಲಿ, ಏಕೆ ಏನೂ ಆಗುವುದಿಲ್ಲವೋ ನೋಡೋಣ." ಈ ಸಂಖ್ಯೆಗಿಂತ ಸ್ವಲ್ಪ ಕಡಿಮೆಯಾದರೂ ಫಲವಿದೆ. ಆದರೆ ಕೇವಲ ೧೦೮ ಸಲ ಜಪ ಮಾಡುವುದರಿಂದ ಏನು ತಾನೇ ಫಲಿಸೀತು ? ಆದ್ದರಿಂದಲೇ ನಾವು ಜಪಕ್ಕೆ ಹೆಚ್ಚು ಗಮನ ನೀಡಬೇಕಾಗಿದೆ. ಜಪ ಮಾಡುವಾಗ ಜೊತೆಜೊತೆಯಲ್ಲೇ ನಿಮ್ಮ ಇಷ್ಟದೇವತೆಯ ಚಿಂತೆಯನ್ನೂ ಮಾಡಲೇಬೇಕು. ನೀವು ಮಾಡುವ ಜಪ ಸರಿಯಾದ ಮಾರ್ಗದಲ್ಲಿ ಸಾಗುತ್ತಿದ್ದರೆ, ನಿಮ್ಮ ಮನಸ್ಸು ತನಗೆ ತಾನೇ ಅಪ್ರಯತ್ನವಾಗಿ ಧ್ಯಾನದಲ್ಲಿ ಮುಳುಗಿಹೋಗುತ್ತದೆ. ನಿಮಗೆ ಅನುಭವಕ್ಕೆ ಬಾರದಂತೆಯೇ ನಿಮ್ಮ ಜಪ–ತಪ, ಎಣಿಸುವಿಕೆ – ಎಲ್ಲವೂ ನಿಲುಗಡೆಗೆ ಬಂದುಬಿಡುತ್ತವೆ.

**ಮನುಷ್ಯ ಜನ್ಮ, ಭಗವಂತನ ಪ್ರಾಪ್ತಿಗಾಗಿ ಇಚ್ಛೆ ಮತ್ತು ಮಹಾಪುರುಷರ ಸಂಗ** – ಈ ಮೂರು ವಸ್ತುಗಳು ಪ್ರಪಂಚದಲ್ಲಿ ಸುಲಭವಾಗಿ ಸಿಗುವಂಥದಲ್ಲ, ದುರ್ಲಭ. ಆದರೆ ಈಗಂತೂ ನಮಗೆಲ್ಲರಿಗೂ ಮನುಷ್ಯಜನ್ಮ ಪ್ರಾಪ್ತಿಯಾಗಿಬಿಟ್ಟಿದೆ. ನಾನು ಭಾವಿಸುತ್ತೇನೆ, ನಮಗೆಲ್ಲರಿಗೂ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಇಚ್ಛೆ ಇದೆ ಎಂದು. ಇನ್ನು ಮಹಾಪುರುಷರ ಸಂಸರ್ಗಕ್ಕೆ ಬರಲು ಯಾರಿಗೆ ಸಾಧ್ಯವಿಲ್ಲವೋ ಅಂಥವರು 'ಶ್ರೀರಾಮಕೃಷ್ಣ ವಚನವೇದ' ಓದಿದರೆ ಸಾಕೇಸಾಕು. ಆ ಮೂಲಕ ಮಹಾಪುರುಷರ ಸಂಗ, ಸಾಧುಸಂಗ ಪಡೆದುಬಿಡಬಹುದು. ಯಾರಾದರಾಗಲಿ ಶಾಂತಭಾವದಿಂದ, ಸಾವಕಾಶವಾಗಿ 'ವಚನವೇದ'ವನ್ನು ಓದುತ್ತ, ಅಲ್ಲಿ ಲಭ್ಯವಿರುವ ಯಾವುದೋ ಒಂದು ದಿನದ ಘಟನೆಯನ್ನಷ್ಟೇ ಧ್ಯಾನ ಮಾಡಿದರೂ ಸಾಕು, ಅವರು ದಕ್ಷಿಣೇಶ್ವರದ ಶ್ರೀರಾಮಕೃಷ್ಣರ ಕೊಠಡಿಗೆ ಹೋಗಿಬಿಡುತ್ತಾರೆ ಮತ್ತು ಧ್ಯಾನದಲ್ಲಿ ಕುಳಿತು ಶ್ರೀರಾಮಕೃಷ್ಣರ ಮಾತನ್ನೇ ಕೇಳಿಸಿಕೊಳ್ಳುತ್ತಾರೆ. ಈ ರೀತಿಯಲ್ಲಿ ಚಿಂತಿಸುತ್ತ, ಭಾವಿಸುತ್ತ ಇದ್ದರೆ ಇದೇ ಸಾಧುಸಂಗವಾಗಿ ಬಿಡುತ್ತದೆ. ರಾಜಾ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಹೇಳುತ್ತಿದ್ದರು, "ನಿಮಗೆ ಒಂದೇ ಮಾತಿನಲ್ಲಿ ಬ್ರಹ್ಮಜ್ಞಾನ ಕೊಡಬಲ್ಲೆ. ಪ್ರತಿದಿನ 'ವಚನವೇದ' ಓದಿ. ಹೀಗೆ ಮಾಡುವುದರಿಂದ ಸಂಸಾರ ತಾಪತ್ರಯ, ಸಂಸಾರದಲ್ಲಿನ ಆಸಕ್ತಿ – ಇವೆಲ್ಲ ಮೆಲ್ಲಮೆಲ್ಲನೆ ಕಡಿಮೆಯಾಗುತ್ತ ಹೋಗುತ್ತದೆ ಮತ್ತು ಭಗವಂತನ ಪ್ರಾಪ್ತಿಗಾಗಿ ಮನಸ್ಸಿನಲ್ಲಿ ತೀವ್ರ ಆಕಾಂಕ್ಷೆ, ವ್ಯಾಕುಲತೆ ಉಂಟಾಗಿಬಿಡುತ್ತದೆ" ಎಂದು.

ಸಂಸಾರದಲ್ಲಿ ಸಾಧನೆ, ಭಜನೆಯಲ್ಲಿ ತೊಡಗಿಕೊಳ್ಳಲು ಸಮಯವೆಲ್ಲಿರುತ್ತದೆ ಎನ್ನುವುದು ಅನೇಕರ ಅಹವಾಲು. ಹೀಗೆ ಯಾರು ಆಲೋಚಿಸುತ್ತಾರೋ, ಅವರ ಭಾವನೆ ಸರ್ವದಾ ಯುಕ್ತವಾದುದಲ್ಲ. ಬೇರೆಲ್ಲ ಕೆಲಸಕಾರ್ಯಗಳಿಗೆ ಸಮಯವಿರುತ್ತದೆ, ಆದರೆ ಕೇವಲ ಭಗವಂತನ ನಾಮಜಪಕ್ಕೆ ಮಾತ್ರ ಸಮಯಾಭಾವ ಎಂದರೆ ಅದು ಒಪ್ಪುವ ಮಾತಲ್ಲ. ನಾವು ಯಾವ ಕಾರ್ಯ